**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ.432/2014**

| | | |
|---|---|---|
| ಹೆಸರು | ಮಂಜುನಾಥ | ಪ್ರಾ.ಸಾ.5 |
| ತಂದೆ/ಗಂಡನ ಹೆಸರು | ದೊಡ್ಡಮರಿಯಪ್ಪ | ಚಾ.ಸಾ.6 |
| ವಯಸ್ಸು | 42 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಶಿವಾನಾಪುರ | 10.02.2025 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : -**

ಚಾ.ಸಾ.1 ರಿಂದ 4 ಮತ್ತು ಆರೋಪಿಯ ಪರಿಚಯವಿರುತ್ತದೆ. ದಿ:03.01.2014 ರಂದು ಬೆಳಗ್ಗೆ 5:30 ಗಂಟೆಗೆ ಫಿಲ್ಟರ್ ಮರಳಿನ ಕುರಿತಾಗಿ ಜಗಳವಾಗಿದ್ದು, ಆಗ ಚಾ.ಸಾ.2 ರವರಿಗೆ ಆರೋಪಿಯು ರಾಡ್ ನಿಂದ ತಲೆಗೆ ಹೊಡೆದಿದ್ದು, ಅಲ್ಲಿ ಗಲಾಟೆಯನ್ನು ಕೇಳಿಸಿಕೊಂಡು ಅಲ್ಲೆ ಪಕ್ಕದಲ್ಲಿದ್ದ, ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಆರೋಪಿಯು ಚಾ.ಸಾ.2 ರವರಿಗೆ ಹೊಡೆದಿದ್ದು, ಗಲಾಟೆಯ ನಂತರ ಚಾ.ಸಾ.1 ರವರು ದೂರು ನೀಡಿದ್ದು, ಅದೇ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದು 5:30 ರಿಂದ 6:15 ಗಂಟೆಯವರೆಗೂ ಮಹಜರು ಕ್ರಮ ಜರುಗಿಸಿ, ಸ್ಥಳದಲ್ಲಿದ್ದ ರಾಡ್ ಅನ್ನು ಅಮಾನತ್ತುಪಡಿಸಿಕೊಂಡರು. ಆ ಸಮಯದಲ್ಲಿ ಚಾ.ಸಾ.1, 3, 4, 5 ರವರು ಹಾಜರಿದ್ದು, ನಾವುಗಳು, ಮಹಜರುಗೆ ಸಹಿ ಮಾಡಿರುತ್ತೇವೆ.

ಸಾಕ್ಷಿ ನಿ.ಪಿ.2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಮು.ಮಾಲು-1 ಅನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು: - ಆರೋಪಿ ಪರ ವಕೀಲರಿಂದ:**

ನನ್ನ ತಂದೆಯ ಹೆಸರು ದೊಡ್ಡಮರಿಯಪ್ಪ. ಚಾ.ಸಾ.1 ರವರ ತಂದೆ ಹಾಗೂ ನನ್ನ ತಂದೆ ಸಹೋದರರು ಎಂದರೆ ಸರಿ. ಚಾ.ಸಾ.1, 2 ಹಾಗೂ ನಾನು ಚಿಕ್ಕಪ್ಪ-ದೊಡ್ಡಪ್ಪಂದಿರ ಮಕ್ಕಳು ಎಂದರೆ ಸರಿ. ನಾನು ಯಾವುದೇ ರಾಜಕೀಯ ಪಕ್ಷದ ಅನುಯಾಯಿ ಆಗಿರುವುದಿಲ್ಲ. ಆರೋಪಿ ಪ್ರಸ್ತುತ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ

ಆರೋಪಿಯ ನಡುವೆ ರಾಜಕೀಯ ವೈಶಮ್ಯ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ಚಾ.ಸಾ.1 ರವರ ನಡುವೆ ಕೋಳಿ-ಜಗಳ ವಾಗಿ, ದೂರನ್ನು ಸಹ ಪೋಲಿಸ್ ಠಾಣೆಗೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಊರಿನ ಜನರು ಸೇರಿ ರಾಜಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಶಿವನಾಪುರದಲ್ಲಿಯೇ ವಾಸವಿರುತ್ತೇನೆ. ಸಾಮಾನ್ಯವಾಗಿ ಊರಿನಲ್ಲಿ ಏನಾದರೂ ಗಲಾಟೆಗಳಾದರೆ ಎಲ್ಲರಿಗೂ ತಿಳಿದಿರುತ್ತವೆ ಎಂದರೆ ಸರಿ. ಹಾಗಾಗಿ ನನಗೂ ಸಹ ಕೋಳಿ ಜಗಳದ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸದರಿ ಚಾ.ಸಾ.1 ಹಾಗೂ ಆರೋಪಿಯ ನಡುವೆ ಇದ್ದ ವೈಶಮ್ಯದಿಂದ ದಾಖಲಾಗಿರುವ ಸುಳ್ಳು ಪ್ರಕರಣದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣದ ಗಲಾಟೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನೋಡಿದ ಗಲಾಟೆಯ ಕುರಿತು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಹಜರು ಸಾಕ್ಷಿದಾರನಾಗಿದ್ದ ಬಗ್ಗೆ ಮತ್ತು ಕೃತ್ಯ ನೋಡಿದ ಸಾಕ್ಷಿಯಾಗಿ, ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಗಲಾಟೆ ಆದಾಗ ನಾನು ನಮ್ಮ ತೋಟದಲ್ಲಿದ್ದೆ. ನಮ್ಮ ತೋಟದಿಂದ ಘಟನಾ ಸ್ಥಳ 50-100 ಮೀ. ದೂರದಲ್ಲಿರುತ್ತದೆ. ಘಟನಾ ಸ್ಥಳದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಸರ್ವೆ ಸಂಖ್ಯೆ:100/1-2 ಆಗಿರುತ್ತದೆ. ನಾನು ನಮ್ಮ ಜಮೀನಿನಲ್ಲಿ ಗೇಣಿದಾರನಾಗಿ ವ್ಯವಸಾಯ ಮಾಡುತ್ತಿದ್ದೇನೆ. ಸದರಿ ಜಮೀನು ನನ್ನ ಸ್ವಂತ ಜಮೀನಾಗಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತಿರುವ ಜಮೀನು ಯಾರಿಗೆ ಸೇರಿದ್ದು ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆ ನಡೆದ ಜಮೀನಿನ ಪಕ್ಕದಲ್ಲಿ ನಾನು ಯಾವುದೇ ಜಮೀನಿನ ಮಾಲೀಕನಾಗಿರುವುದಿಲ್ಲ ಮತ್ತು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ, ಮತ್ತು ಯಾವುದೇ ಗಲಾಟೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಜೊತೆ ಹೊಂದಿರುವ ರಾಜಕೀಯ ವೈಶಮ್ಯದಿಂದ ಹಾಗೂ ಅವರಿಗೆ ಅಗದಿರುವ ನನ್ನ ಸಹೋದರರ ಮಾತು ಕೇಳಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಪ್ರಸ್ತುತ ಪ್ರಕರಣದಲ್ಲಿ ನಡೆದಿದೆ ಎನ್ನಲಾಗುವ ಘಟನೆಯಲ್ಲಿ ಭಾಗಿಯಾಗಿರದೇ ಇದ್ದರೂ ಚಾ.ಸಾ.1 ಮತ್ತು 2 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಮಹಜರುನಲ್ಲಿ ಭಾಗವಹಿಸಲು ನೋಟಿಸ್ ನೀಡಿರುವುದಿಲ್ಲ, ಮಹಜರು ಸಮಯದಲ್ಲಿ ನಾನು ಆಗಲೇ, ಸ್ಥಳದಲ್ಲಿದ್ದೆ. ಮಹಜರು ಸಮಯದಲ್ಲಿ ಸುಮಾರು 20 ಜನ ಹಾಜರಿದ್ದು, ಎಲ್ಲರ ಹೆಸರು ಮತ್ತು ಊರನ್ನು ಹೇಳಲಾಗುವುದಿಲ್ಲ. ಸದರಿ ಜನರ ಹೆಸರುಗಳುನ್ನು ಪೋಲಿಸರು ಬರೆದುಕೊಂಡಿರುವುದಿಲ್ಲ, ಆದರೆ ನಮ್ಮ ಹೆಸರುಗಳನ್ನು ಮಾತ್ರ

ಬರೆದುಕೋಂಡಿರುತ್ತಾರೆ. ಪ್ರಸ್ತತ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ, ಮಹಜರುಗೆ ಸಹಿ ಮಾಡಲು ಸಹ ಪೋಲಿಸರು ಕರೆದಿರುವುದಿಲ್ಲ. ನಾನು ನಿ.ಪಿ.2 ಕ್ಕೆ ಎಲ್ಲಿ ಸಹಿ ಮಾಡಿರುತ್ಥೇನೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ, ಆದರೂ ಸಹ, ಚಾ.ಸಾ.1 ರವರ ಮಾತು ಕೇಳಿ, ನಿ.ಪಿ.2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ಸ್ಥಳದಲ್ಲಿ ಸಹಿ ಮಾಡಿರುತ್ಥೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎನ್ನುವ ಸಮಯದಲ್ಲಿ, ಮಹಜರು ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮು.ಮಾಲು-1 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಮು.ಮಾಲು-1 ಒಂದು ಇಂಚು ದಪ್ಪ, ಎರಡು ಅಡಿ ಉದ್ದ ಇರುವುದಿಲ್ಲ ಎಂದರೆ ಸರಿ. ಮು.ಮಾಲು-1 2 3/4 ಅಡಿ ಇದೆ ಎಂದರೆ ಸರಿಯಲ್ಲ, ಅದು 2 1/4 ಅಡಿ ಇರುತ್ತದೆ. ಮು.ಮಾಲು-1 ಕೃತ್ಯಕ್ಕೆ ಸಂಬಂಧಿಸಿರುವುದಿಲ್ಲ, ಚಾ.ಸಾ.1 ರವರು ಪ್ರಕರಣಕ್ಕೆ ಸೃಷ್ಟಿಸಿ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾಲು-1 ಅನ್ನು ಚಾ.ಸಾ.1 ರವರು ನೀಡಿರುವುದಿಲ್ಲ ಮತ್ತು ಕೃತ್ಯಕ್ಕೆ ಬಳಸಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾಲು-1 ಅನ್ನು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.2 ಅನ್ನು ಸ್ಥಳದಲ್ಲಿ ತಯಾರಿಸಿರುವುದಿಲ್ಲ, ಪೋಲಿಸ್ ಠಾಣೆಯಲ್ಲಿ ತಯಾರಿಸಿದ್ದು, ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಸಹಿ ಮಾಡಿದ್ದರೂ, ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾ.ಸಾ.1 ಹಾಗೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**

**<u>2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ</u>**

**<u>ಸಿ.ಸಿ.432/2014</u>**

| | | |
|---|---|---|
| ಹೆಸರು | ಚಿನ್ನಪ್ಪ | ಪ್ರಾ.ಸಾ.4 |
| ತಂದೆ/ಗಂಡನ ಹೆಸರು | ವೆಂಕಟರಮಣಪ್ಪ | ಚಾ.ಸಾ.4 |
| ವಯಸ್ಸು | 36 ವರ್ಷ | |
| ಕೆಲಸ | ಕೂಲಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಶಿವಾನಾಪುರ | 10.02.2025 |

**<u>ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : -</u>**

ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ಆರೋಪಿ ಹಲ್ಲೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**<u>ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ರವರಿಂದ ಪಾಟೀ ಸವಾಲು: -</u>**

ದಿನಾಂಕ:**04.01.2014** ರಂದು ನಾನು ಪೋಲಿಸರ ಮುಂದೆ ನಾನು……………………………………. ಕೋರುತ್ತೇನೆ ಎಂದು ಹೇಳೀಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಹೇಳಿಕೆ ನಿರಾಕರಿಸಿದ್ದರಿಂದ ಹೇಳಿಕೆಯ ಭಾಗವನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**